3

# ಆಧ್ಯಾತ್ಮಿಕತೆ (3)

ಹಿಂದಿನ ಪಾಠದಿಂದ ಆತ್ಮಿಕತೆಯ ನಮ್ಮ ಚರ್ಚೆಯನ್ನು ಮುಂದುವರಿಸಿ, ನಿಜವಾದ ಆತ್ಮಿಕತೆಯ ಹಲವಾರು ಹೆಚ್ಚು ಗುಣಲಕ್ಷಣಗಳನ್ನು ಪರೀಕ್ಷಿಸೋಣ.

5. ಅದು ಆಸಕ್ತಿಯುಳ್ಳ ಪ್ರಾರ್ಥನೆಯಾಗಿದೆ (ಯಾಕೋಬ 5:13-16). ಪ್ರಾರ್ಥನೆಯು ಆತ್ಮಿಕ ಬೆಳವಣಿಗೆಯಲ್ಲಿ ಮೂಲೆಗಲ್ಲಾಗಿದೆ. ಎಡೆಬಿಡದೆ ಪ್ರಾರ್ಥಿಸಿರಿ (1 ಥೆಸಲೊನೀಕ 5:17). ಪ್ರಾರ್ಥಿಸದೇ ಇರುವಂಥದ್ದು ನಮ್ಮ ದೊಡ್ಡ ಬಲಹೀನತೆಯಾಗಿದೆ, ಮತ್ತು ನಮ್ಮ ದೊಡ್ಡ ಪಾಪವಾಗಿದೆ. ದೇವರ ಬಳಿಗೆ ಬರುವದಕ್ಕೆ ಪ್ರಾರ್ಥಿಸತಕ್ಕದ್ದು, ನಮ್ಮ ಅಪೇಕ್ಷೆಗಳನ್ನು ಹೊಂದಿಕೊಳ್ಳುವದಕ್ಕಾಗಿ ಅಲ್ಲ. ಪ್ರಾರ್ಥಿಸುವುದು ಕೆಲಸಕ್ಕಾಗಿ ಹಾಜರಿ ಕೊಡುವದಾಗಿದೆ. ಮೊದಲು ನನಗೆ ದೇವರ ಅಗತ್ಯತೆಯಿತ್ತು ... ಆ ಮೇಲೆ ನಾನು ದೇವರನ್ನು ಬಯಸಿದೆನು ... ಈಗ ನನಗೆ ದೇವರು ಇರತಕ್ಕದ್ದು. ಪ್ರಾರ್ಥಿಸುವುದು ದೇವರ ಅಗಾಧವಾದ ಅರುಹುವುಳ್ಳದ್ದಾಗಿರುವುದಾಗಿತ್ತು. ಪ್ರಾರ್ಥಿಸುವುದು ದೇವರ ತೀರದ ಬಲಕ್ಕೆ ಮಾರ್ಗವಾಗಿರುತ್ತದೆ. ಪರಾರ್ಥ ಪ್ರಾರ್ಥನೆಯು ನಮಗಾಗಿ ಇಡೀ ನೂತನ ಜಗತ್ತನ್ನು ತೆರೆಯುತ್ತದೆ.

6. ಅದು ದೇವರು. ಆತ್ಮಿಕತೆಯು ದೇವರಲ್ಲಿ ಕ್ರಿಸ್ತನೊಂದಿಗೆ ಜೀವಿಸುವ ಜೀವಿತವಾಗಿದೆ (ಕೊಲೊಸ್ಸೆ 3:1-4). ಕ್ರೈಸ್ತತ್ವವು "ದೇವರ" ಧರ್ಮವಾಗಿದೆ, ಸರ್ವಶಕ್ತ ದೇವರ ಭಯಾನಕವಾದ ಸಾರ್ವಭೌಮತ್ವದ ಮೇಲೆ ಕೇಂದ್ರೀಕರಿಸಲ್ಪಟ್ಟಿರುತ್ತದೆ. "ದೇವ ಭಕ್ತಿಯ ವಿಷಯದಲ್ಲಿ ಸಾಧನೆ ಮಾಡಿಕೋ" (1 ತಿಮೊಥೆ 4:7ಬಿ; ಹೊಡ್ಜ್ ಭಾಷಾಂತರ). ನಮ್ಮ ಎಲ್ಲಾ ಜೀವಿತಗಳು ದೇವರ ಚಿತ್ತದ ಕೆಳಗಿರುತ್ತವೆ. ದೇವರಲ್ಲಿ ನಂಬಿಕೆಯಿಡುವುದು ಒಂದು ಪ್ರತ್ಯೇಕ ವಿಧದಲ್ಲಿ ಜೀವಿಸುವುದಾಗಿದೆ: "ನಾನು ಪರಿಶುದ್ಧನಾಗಿರುವದರಿಂದ, ನೀವೂ ಪರಿಶುದ್ಧರಾಗಿರಿ" (1 ಪೇತ್ರ 1:15, 16). ಆತ್ಮಿಕತೆಯು ನಮ್ಮ ಜೀವಿತಗಳಿಗಾಗಿ ದೇವರ ಚಿತ್ತದ ಅನುದಿನದ ತಿಳುವಳಿಕೆಯಾಗಿದೆ. ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದನು (ಆದಿಕಾಂಡ 1). ಮಾನವನ ಸ್ವರೂಪದಲ್ಲಿ ದೇವರನ್ನು ಮಾಡುವದಕ್ಕಿಂತ ಹೆಚ್ಚು ಮೋಸಕರವಾದ ಸುಳ್ಳು ಬೋಧನೆಯು ಯಾವುದೂ ಇರಲಾರದು. ಆತ್ಮಿಕತೆಯು ನಿತ್ಯವಾದ, ದೇವರೊಂದಿಗೆ ಅನುದಿನದ ಪೂರ್ವಾಲೋಚನೆಯಿಂದ ಇರುವುದಾಗಿದೆ. ಆತ್ಮಿಕತೆಯು ಸುಮ್ಮನೇ ದೇವರಿಗೆ ವಿಧೇಯನಾಗಿರುವುದಾಗಿದೆ.

ನಿನ್ನ ಕಾರ್ಯಕ್ರಮವನ್ನು ಪ್ರಾಧಾನ್ಯತೆಯಿಂದ ರಚಿಸಬೇಡ; ನಿನ್ನ ಪ್ರಾಧಾನ್ಯತೆಗಳನ್ನು ಕ್ರಮಗೊಳಿಸು. ನಿನ್ನ ದಿನದ ಕಾರ್ಯಕ್ರಮ ಯೋಜನೆಯನ್ನು ದೇವರು ನಿಯಂತ್ರಿಸಲಿ. ಪ್ರಾಧಾನ್ಯತೆಯ ಯಾದಿಯನ್ನು ದೇವರು ಒಪ್ಪಿಕೊಳ್ಳಲು ಯಾವುದು ಮಹತ್ವದ್ದಾಗಿದೆ? ದೇವರೊಂದಿಗೆ ದಿನವನ್ನು ಪ್ರಾರಂಭಿಸಿರಿ, ದೇವರೊಂದಿಗೆ ದಿನವನ್ನು ಮುಗಿಸಿರಿ, ಮತ್ತು ದಿನವೆಲ್ಲಾ ದೇವರೊಂದಿಗೆ ನಡೆಯಿರಿ.

7. ಅದು ಕ್ರಿಸ್ತನು. "ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ ..." (ಫಿಲಿಪ್ಪಿ 2:5-8). "ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ

ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ" (2 ಕೊರಿಂಥ 3:18). ಕ್ರಿಸ್ತನಲ್ಲಿ ನಾವು ನೂತನ ಸೃಷ್ಟಿಯಾಗಿದ್ದೇವೆ (2 ಕೊರಿಂಥ 5:17). ಕ್ರಿಸ್ತನಲ್ಲಿ ನಾವು ಶಿರಸ್ಸಾದ ಕ್ರಿಸ್ತನ ಪ್ರಮಾಣಕ್ಕೆ ಬೆಳೆಯುತ್ತೇವೆ (ಎಫೆಸ 4:15). ಆತ್ಮಿಕತೆಯು ಕ್ರಿಸ್ತನಲ್ಲಿ ನಮ್ಮ ರೂಪಿಸುವಿಕೆಯಾಗಿದೆ. ಪರಿಶುದ್ಧಾತ್ಮನು ನಮಗೆ ನಾವು ಕ್ರಿಸ್ತನಂತೆ ಆಗಿರಬೇಕೆಂದು ಬೋಧಿಸುತ್ತಾನೆ, ಆದರೆ ಪರಿಶುದ್ಧಾತ್ಮನಂತೆ ಅಲ್ಲ. ಕ್ರೈಸ್ತತ್ವವು ಕ್ರಿಸ್ತನು *period* - not Christ, *plus*! ಎಂದು ಕೊಲೊಸ್ಸೆ ಪತ್ರಿಕೆಯು ನಮಗೆ ಬೋಧಿಸುತ್ತದೆ. ಯಾರೊಬ್ಬನೂ ಕ್ರಿಸ್ತನ ಮೇಲೆ ಮತ್ತು ತನ್ನ ಮೇಲೆ ಒಂದೇ ಸಮಯದಲ್ಲಿ ಕೇಂದ್ರೀಕರಿಸಲಾರನು. "ನನ್ನನ್ನು ಹಿಂಬಾಲಿಸು" ಎಂದು ಯೇಸುವು ಒಂದೇ ಅಪ್ಪಣೆಯನ್ನು ಕೊಟ್ಟಿದ್ದಾನೆ.

8. ಅದು ಪರಿಶುದ್ಧಾತ್ಮನಾಗಿದ್ದಾನೆ. ಆತ್ಮನನ್ನು ಹೊರತು ಪಡಿಸಿ ಒಬ್ಬನು ಆತ್ಮಿಕನೆಂದು ಹೇಗೆ ಹೇಳಿಕೊಳ್ಳಬಹುದು? ನಾವು ನೀರಿನಿಂದಲೂ ಆತ್ಮನಿಂದಲೂ ಹೊಸದಾಗಿ ಹುಟ್ಟಿದ್ದೇವೆ (ಯೋಹಾನ 3:5), ಆತ್ಮನಿಂದ ನಡಿಸಲ್ಪಡುತ್ತೇವೆ (ರೋಮಾಪುರ 8:14), ಮತ್ತು ಆತ್ಮನಿಂದ ತುಂಬಿಸಲ್ಪಡುತ್ತೇವೆ (ಎಫೆಸ 5:18). ನಾವು ಆತ್ಮಿಕತೆಯ ಮನಸ್ಸುಳ್ಳವರಾಗಿರಬೇಕು (ರೋಮಾಪುರ 8:6; KJV). ಹೀಗಿದ್ದರೂ, ಆತ್ಮನ ಕೇಂದ್ರೀಕರಣವು ಎಂದೂ ಆತನ ಮೇಲೆಯೇ ಇರಲಿಲ್ಲ; ಆತನ ಕೇಂದ್ರೀಕರಣವು ದೇವರ ಮೇಲೆ ಇಲ್ಲವೇ ಕ್ರಿಸ್ತನ ಮೇಲೆ ಇತ್ತು. ಆತ್ಮನನ್ನು ಪ್ರಸಿದ್ಧಿಪಡಿಸುವುದು ಆತ್ಮನನ್ನು ಧೂಷಣೆ ಮಾಡುವುದಾಗಿದೆ. ಈಗ ಆತ್ಮನು ಕ್ರಿಸ್ತನನ್ನು ಮಹಿಮೆಪಡಿಸಲಿಕ್ಕೆ ನಮ್ಮಲ್ಲಿ ಕೆಲಸ ಮಾಡುತ್ತಾನೆ.

9. ಅದು ಸಭೆಯಾಗಿರುತ್ತದೆ. ನಾವೆಲ್ಲರೂ (ಬೇರೊಬ್ಬರಿಂದ) ಒಂದು ದೇಹದಲ್ಲಿ, ಸಭೆಯಲ್ಲಿ ಬಾಪ್ತಿಸ್ಮ ಹೊಂದಿರುತ್ತೇವೆ. ನಾವೆಲ್ಲರೂ ಕುಟುಂಬದ ಭಾಗವಾಗಿದ್ದೇವೆ. ಸಮಾಜವಾಗಿ ನಾವು ಪ್ರತೀ ಭಾನುವಾರ ಕರ್ತನ ಮೇಜಿನ ಸುತ್ತ ಕೂಡಿ ಬರುತ್ತೇವೆ. ಸಮಾಜಕ್ಕಿಂತ ಮೇಲಾಗಿ ವ್ಯಕ್ತಿಗಳು ಉನ್ನತಕ್ಕೇರಿಸಲ್ಪಟ್ಟ ಯಾವ ಗುಂಪೂ ಉಳಿದು ಕೊಳ್ಳಲಾರದು. ದೇಹದಿಂದ ಕಡಿಯಲ್ಪಟ್ಟ ಕೈ ಕೆಲಸ ಮಾಡಲಾರದು. ನನಗೆ ನೀನು ಬೇಕು, ಮತ್ತು ನಿನಗೆ ನಾನು ಬೇಕು. ದೇವರೊಂದಿಗಿನ ನಮ್ಮ ಅನುದಿನದ ನಡೆಯುವಿಕೆಯು ಸಭೆಯ ನಡೆಯುವಿಕೆಯಾಗಿದೆ. ಆತ್ಮಿಕವಾಗಿ, ಅದು ಸ್ವಂತದ್ದಾಗಿದ್ದರೂ, ಬಹಿರಂಗದ್ದಾಗಿರುತ್ತದೆ. ಒಂದು ಶಿಶುವು ಕುಟುಂಬದಲ್ಲಿ ಜನಿಸಿರುವುದು. ಶಿಶುವು ತನ್ನ ಹೆಸರನ್ನು ಸ್ವೀಕರಿಸುವುದು, ಗುರುತಿಸಲ್ಪಡುವುದು ಮತ್ತು ಕುಟುಂಬದಲ್ಲಿ ಮಾತ್ರವೇ ಮುಂದುವರಿಯುವಿಕೆಯನ್ನು ಹೊಂದುವುದು. ಆತ್ಮಿಕತೆಯು ಸಾಮೂಹಿಕವಾದದ್ದಾಗಿದೆ (ಕುಟುಂಬಕ್ಕೆ ಒಳಪಟ್ಟದ್ದಾಗಿರುತ್ತದೆ).

10. ಅದು ಅನುದಿನದ ಕಾರ್ಯಕ್ರಮವಾಗಿದೆ. ಜೀವಿತವು ನಿತ್ಯವಾಗಿ ಅನುದಿನದ್ದಾಗಿದೆ. ಮದುವೆಯು ಅನುದಿನದ್ದಾಗಿದೆ. ಕೆಲಸವು ಅನುದಿನದ್ದಾಗಿದೆ. ಸ್ನೇಹವು ಅನುದಿನದ್ದಾಗಿದೆ. ಆತ್ಮಿಕತೆಯು ನಮ್ಮ ಅನುದಿನದ ಕೆಲಸಗಳಲ್ಲಿ ಪ್ರಕಟಿಸಲ್ಪಡುತ್ತದೆ. ನಿನ್ನ ದಿನದಲ್ಲಿ ಏನೇ ಸಂಭವಿಸುತ್ತಿದ್ದರೂ ಜನರೂಂದಗೆ ಸರಿಯಾಗಿ ವ್ಯವಹರಿಸು! ಆತ್ಮಿಕತೆಯು ಮನಸ್ಸು ಮತ್ತು ಜೀವನ ಶೈಲಿ *ಎರಡೂ* ಆಗಿರುತ್ತದೆ. ಸಾಮಾಜಿಕ ಸಂಘಕ್ಕಿಂತ ಹೆಚ್ಚಾಗಿ ಕರ್ತನ ಸಭೆಗೆ ಸಮರ್ಪಣೆಯ ಅಗತ್ಯತೆಯಿರುತ್ತದೆ! ತರಬೇತಿಯಿಲ್ಲದ, ಸಿದ್ಧರಾಗಿರದೇ ಇದ್ದ ಸೈನಿಕರು ಯುದ್ಧದಲ್ಲಿ ನಿರೂಪಯೋಗಿಗಳಾಗಿದ್ದಾರೆ. ಮನುಷ್ಯನು ದೇವರ ಸಾನ್ನಿಧ್ಯವನ್ನು ಅನುದಿನದ ಅಸ್ತಿತ್ವದಲ್ಲಿಯಕ್ಕಿಂತ ಹೆಚ್ಚಾಗಿ ಸಂದಿಗ್ಧ ಪರಿಸ್ಥಿತಿಯಲ್ಲಿ ಹುಡುಕುವುದು ದುಃಖಕರವಾದದ್ದಾಗಿದೆ! ಒಬ್ಬ "ಸಿದ್ಧನಾಗಿರುವ" ವ್ಯಕ್ತಿಯು ಎಂದೂ "ಸಿದ್ಧನಾಗ ಬೇಕಾಗಿರುವದಿಲ್ಲ."

ನಾವು ಸಾಯುವದಕ್ಕಿಂತ ಮೊದಲು ಯಾಕೆ ಹುಟ್ಟಿದ್ದೇವೆ ಎಂಬುದನ್ನು ನಾವು ಕಂಡು ಕೊಳ್ಳತಕ್ಕದ್ದು.

11. ಅದು ಶಿಕ್ಷೆಯಾಗಿದೆ. ಸಮೃದ್ಧಿಗೊಳಿಸುವ ಸುವಾರ್ತೆಯು ಸೋತು ಹೋಗುತ್ತದೆ! ದೇವರು ತಾನು ಪ್ರೀತಿಸುವವರನ್ನು ಶಿಕ್ಷಿಸುತ್ತಾನೆ (ಇಬ್ರಿಯ 12:5-11). ಒಳ್ಳೇ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಶಿಕ್ಷಿಸುತ್ತಾರೆ. ಆತ್ಮಿಕತೆಯು ಕೋಮಲತೆಯಾಗಿದೆ; ಆತ್ಮಿಕತೆಯು ಅಷ್ಟೇ ಕಠಿಣತೆಯುಳ್ಳದ್ದಾಗಿದೆ. ಆತ್ಮಿಕತೆಯು ತನ್ನನ್ನು ಅಲ್ಲಗಳೆದುಕೊಳ್ಳುವದನ್ನೂ ನಮ್ಮ ಶಿಲುಬೆಗಳನ್ನೂ ಸ್ವೀಕರಿಸುವದನ್ನೂ ಒಳಗೊಂಡಿರುತ್ತದೆ. ರಕ್ಷಣೆಯು ಹಕ್ಕುಪಡೆದುಕೊಳ್ಳುವಂಥದ್ದಾಗಿರುವದಿಲ್ಲ; ಅದು ಬೆಳವಣಿಗೆಯ ಒಂದು ವಿಧಾನವಾಗಿದೆ.

12. ಆತ್ಮಿಕತೆಯು *ಸಮತೋಲನೆಯಾಗಿದೆ*!

◇◇◇◇◇◇◇◇

# ಯೇಸುವನ್ನು ಹಿಂಬಾಲಿಸುವುದು

## ಎಫೆಸ 1:1-14

*"ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು" (ಇಬ್ರಿಯ 13:8).*

ಒಂದು ಕಾರ್ಯವು ಕಾರ್ಯಮಾಡುವವನಿಗಿಂತ ಹೆಚ್ಚು ಉತ್ತಮವಾಗಿರಲಾರದು. ಕ್ರೈಸ್ತತ್ವವು ಕ್ರೈಸ್ತರಿಗಿಂತ ಯಾವುದೇ ರೀತಿಯಲ್ಲಿ ಹೆಚ್ಚು ಉತ್ತಮವಾಗಿರಲಾರದು. ಕ್ರೈಸ್ತರು ತಾವು ಬೋಧಿಸುವದನ್ನು ನಂಬತಕ್ಕದ್ದು. ನಾವು ನಂಬುವದನ್ನು ನಾವು ನಿಜವಾಗಿಯೂ ನಂಬತಕ್ಕದ್ದು. "ನಾವು ನಿಜವಾಗಿಯೂ ನಂಬುತ್ತೇವೆಯೋ?" ಎಂಬುದು ಪೀಡಿಸುವ ಪ್ರಶ್ನೆಯಾಗಿರುತ್ತದೆ. ನಾವು ಯಾರಾಗಿದ್ದೇವೆ ಎಂಬುದನ್ನು ನಾವು *ತಿಳಿಯತಕ್ಕದ್ದು*; ನಾವು ಯಾರಾಗಿದ್ದೇವೋ *ಅವರಾಗಿರತಕ್ಕದ್ದು.*

ಇತ್ತೀಚೆಗಿನ ಯು.ಎಸ್. ಪ್ರೆಸಿಡೆಂಟರ ಚುನಾವಣೆಯ ಸಮಯದಲ್ಲಿ, ಒಬ್ಬ ರಾಜಕೀಯ ವ್ಯಕ್ತಿ ಹೀಗೆ ಬರೆದನು, "ನೈತಿಕವಾಗಿ, ಗರ್ಭಪಾತವು ಕೊಲೆಯಾಗಿದೆ." "ರಾಜಕೀಯವಾಗಿ, ನಾನು ಆಯ್ಕೆಯ ಪರವಾಗಿದ್ದೇನೆ" ಎಂದೂ ಅವನು ಹೇಳಿದನು. ಈ ರಾಜಕೀಯ ವ್ಯಕ್ತಿಯು ತಾನು ಏನನ್ನು ನಂಬಿರುವೆನೆಂಬುದನ್ನು ನಂಬುವದಿಲ್ಲ ಎಂಬುದು ಸ್ಪಷ್ಟವಾಗುತ್ತದೆ! ಇದು ರಾಜಕೀಯ ವ್ಯಕ್ತಿಗಳಲ್ಲಿ ಸಾಕಷ್ಟು ಕೆಟ್ಟದ್ದಾಗಿರುತ್ತದೆ; ಇದು ಕ್ರೈಸ್ತರೊಂದಿಗೆ ದೇವದೂಷಣೆಯಾಗಿರುತ್ತದೆ.

ಆದಿ ಸಭೆಯು ತಮ್ಮ ಜಗತ್ತಿಗೆ ಸುವಾರ್ತೆ ಸಾರಿತು. ಯಾಕೆ? ಯಾಕಂದರೆ ಅವರು ನಂಬಿದ್ದರು. ತಮ್ಮ ನಂಬಿಕೆಯು ಪರಿಪೂರ್ಣವಾಗಿ ಸತ್ಯವಾದದ್ದು, ಅದಕ್ಕೆ ಯಾವ ವಿರೋಧಿಗಳಿರುವದಿಲ್ಲ ಮತ್ತು ಯಾವುದೇ ಒಪ್ಪಂದಗಳನ್ನು ಸ್ವೀಕರಿಸುವದಿಲ್ಲ ಎಂಬುದನ್ನು ತಿಳಿದಿದ್ದರು. ಕ್ರೈಸ್ತತ್ವವು ಸತ್ಯವಾಗಿದ್ದರೆ, ಆಗ ನಾನು ಕ್ರೈಸ್ತನಾಗಿರುವೆನು. ನೀನೂ ಸಹ ಕ್ರೈಸ್ತನಾಗಿರತಕ್ಕದ್ದು. ಬೈಬಲಿನ ಕ್ರೈಸ್ತತ್ವವು ಪ್ರತ್ಯೇಕವಾದದ್ದೂ, ನಿರ್ದಿಷ್ಟವಾದದ್ದೂ ಇಕ್ಕಟ್ಟಾದದ್ದೂ ಆಗಿರುತ್ತದೆ; ಅದು ನಿಜವಾದದ್ದೂ ಸರಿಯಾದದ್ದೂ ಆಗಿರುತ್ತದೆ. ನಾವು ನಿಜವಾಗಿಯೂ ಇದನ್ನು ನಂಬುತ್ತೇವೆಯೋ?

ನಮ್ಮ ಅನುದಿನದ ನಡೆಯುವಿಕೆಯೂ ದೇವರೊಂದಿಗೆ ಕ್ರೈಸ್ತ ಜೀವಿತವಾಗಿದೆ. ನಮ್ಮ

ಸಂಸ್ಕೃತಿಗೆ ಜೀವನಕ್ಕಾಗಿ ಒಂದು ವ್ಯಾವಹಾರಿಕ ತತ್ವಜ್ಞಾನದ ಅತ್ಯವಶ್ಯಕತೆಯಿರುತ್ತದೆ. ನಿನ್ನ ಜೀವಿತ ಯಾವುದು? ಜೀವನದಲ್ಲಿ ನಿನ್ನ ಗುರಿಯು ಯಾವುದು? ಯೇಸುವು ಪರ್ವತದ ಮೇಲಿನ ತನ್ನ ಸವಿಸ್ತಾರವಾದ ಪ್ರಸಂಗದಲ್ಲಿ ಇದರ ಬಗ್ಗೆ ಹೇಳಿದನು (ಮತ್ತಾಯ 5:6). ಇದು ಜೀವಿಸಲಿಕ್ಕೆ ಮಾರ್ಗವೆಂದು ಯೇಸು ಹೇಳಿದನು. ಧನ್ಯವಾಚಕಗಳು ನಮ್ಮ "ಮನೋಭಾವನೆಗಳನ್ನು" ವಿವರಿಸುವವು; ನಮ್ಮ ಆಂತರಿಕ ಗುಣಲಕ್ಷಣವು ನಮ್ಮ ಬಾಹ್ಯ ರೂಢಿಗಳನ್ನು ತೀರ್ಮಾನಿಸುವವು. ಕ್ರೈಸ್ತೇತರರು ಕ್ರೈಸ್ತರಂತೆ ವರ್ತಿಸುವದನ್ನು ನಿರೀಕ್ಷಿಸದೇ ಇರುವದಕ್ಕೆ ಇದು ಕಾರಣವಾಗಿದೆ. ಪ್ರತೀದಿನದ ಮನೋಭಾವನೆಗಳು ಮತ್ತು ಕೃತ್ಯಗಳು ಎಷ್ಟು ಶಕ್ತಿಯುಳ್ಳವುಗಲಾಗಿವೆ ಎಂಬುದನ್ನು ಕೆಲವರು ಮಾತ್ರವೇ ಗ್ರಹಿಸಿಕೊಳ್ಳುತ್ತೇವೆ. ದೇವರು ದೇವರಾಗಿದ್ದಾನೆಂದು ನಂಬುವದಕ್ಕೆ ದೇವರು ಒಂದು ನಿರ್ದಿಷ್ಟವಾದ ರೀತಿಯಲ್ಲಿ ಜೀವಿಸಬೇಕು. "ಸೌಜನ್ಯದ" ಕ್ರೈಸ್ತತ್ವಕ್ಕೆ ಇದು ಸಮಯ ವಾಗಿರುವದಿಲ್ಲ. ಮಹಾ ಆಜ್ಞೆಯು ಇನ್ನೂ ಇರುತ್ತದೆ: "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ" (ಮಾರ್ಕ 16:15). ಜೀವನದ ಎಲ್ಲಾ ವಿಷಯಗಳಲ್ಲಿ, ಮೊದಲು ವಿಶ್ವಾಸವು ಮುರಿದು ಹೋಗುತ್ತದೆ. ನಿನ್ನ ವಿಶ್ವಾಸವನ್ನು ಕಾಪಾಡಿಕೋ. ಕ್ರೈಸ್ತರು *ನಂಬತಕ್ಕದ್ದು.* "ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ" (ಯೋಹಾನ 20:31).

## ಒಬ್ಬನೇ ನಿಜವಾದ ದೇವರಲ್ಲಿ ನಾವು ನಂಬಿಕೆಯಿಡತಕ್ಕದ್ದು

*ದೇವರು - ದೇವರು - ದೇವರು!* ವಿಷಯವು ದೇವರು ಆಗಿದ್ದಾನೆ. ಒಬ್ಬನೇ ಸಾರ್ವಭೌಮ, ನಿತ್ಯನಾದ, ಸೃಷ್ಟಿಸುವ, ಮಿತಿಯಿಲ್ಲದ, ಬದಲಾಗದ, ಪರಿಶುದ್ಧ, ಸರ್ವಶಕ್ತನಾದ ದೇವರು. "ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟು ಮಾಡಿದನು" (ಆದಿಕಾಂಡ 1:1); "ಇಸ್ರಾಯೇಲ್ಯರೇ, ಕೇಳಿರಿ; ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು; ನೀವು, ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಆತ್ಮದಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸ ಬೇಕು" (ಧರ್ಮೋಪದೇಶಕಾಂಡ 6:4, 5). ಯೇಸುವು ನಂಬುವದನ್ನು ಕ್ರೈಸ್ತರು ನಂಬುವರು. ಎಲ್ಲದಕ್ಕಿಂತ ಹೆಚ್ಚಾಗಿ ಈ ಆಜ್ಞೆಯನ್ನು ಯೇಸುವು ಸ್ಥಿರಪಡಿಸಿರುವನು (ಮತ್ತಾಯ 22:37-40). ಕ್ರೈಸ್ತತ್ವವು ಎಲ್ಲವನ್ನು ಒಳಗೊಂಡದ್ದು, ಪರಿಪೂರ್ಣವಾದದ್ದು ತತ್ವಗಳುಳ್ಳದ್ದು, ಮತ್ತು ಸಹನೆಯಿಲ್ಲದ್ದು ಆಗಿರುತ್ತದೆ. ಸತ್ಯವು ಒಂದೇ ರೀತಿಯಲ್ಲಿ ಇರುತ್ತದೆ. ಸತ್ಯವಾಗಿರುವುದು ಪರಿಪೂರ್ಣವಾದದ್ದಾಗಿರುತ್ತದೆ. ಒಬ್ಬನೇ ಯೆಹೋವ ದೇವರು ಇರುತ್ತಾನೆ (ವಿಮೋಚನಕಾಂಡ 3ರ "I AM" ಎಂಬ ಮಹಿಮನು).

ದೇವರು ಇರುವಾತನಾಗಿದ್ದರೆ, ಬೇರೆ ಯಾವುದೂ ವಿಶೇಷವಾದದ್ದಲ್ಲ; ಯಾವ ದೇವರು ಇರದಿದ್ದರೂ ಏನೂ ಆಗುವದಿಲ್ಲ. ಎಲ್ಲವನ್ನೂ ಒಂದುಗೂಡಿಸಿ ಹಿಡಿಯಲು ದೇವರು ಕೇಂದ್ರದಲ್ಲಿರುವನು. ದೇವರಿಲ್ಲದೇ, ನೈತಿಕತೆಯು ಇರುವದಿಲ್ಲ - ಎಲ್ಲಾ ಸಂಗತಿಗಳಿಗೆ ಅಪ್ಪಣೆಯಿರುವುದು. ದೇವರು ನಮಗಿರುವುದು ಮತ್ತು ಎಲ್ಲವನ್ನು ಕಳೆದುಕೊಳ್ಳುವುದು, ಎಲ್ಲವೂ ಇದ್ದು ದೇವರನ್ನು ಕಳೆದುಕೊಳ್ಳುವದಕ್ಕಿಂತ ಹೆಚ್ಚು ಉತ್ತಮವಾದದ್ದಾಗಿದೆ. (ಯೇಸು ಇದನ್ನು ಮತ್ತಾಯ 16:24-26ರಲ್ಲಿ ಹೇಳಿದನು.) ಯಾವುದೇ ಸಭೆಯ, ಯಾವುದೇ ವ್ಯಕ್ತಿಯ ಅವನತಿಯು ದೇವರ ವ್ಯಕ್ತಿತ್ವ ಸ್ಥಾನ

ಮತ್ತು ಅಧಿಕಾರವನ್ನು ತಿರಸ್ಕರಿಸುವುದಾಗಿದೆ. ದೇವರ ಅಗತ್ಯತೆಯು ನಿಮ್ಮ ಸಮಸ್ಯೆಯಾಗಿರುವಾಗ, ದೇವರು ಮಾತ್ರವೇ ನಿಮ್ಮ ಪರಿಹಾರವಾಗಿರುವನು. ದೊಡ್ಡ ದೈವಜ್ಞಾನ ಶಾಸ್ತ್ರವು ದೊಡ್ಡ ದೇವರನ್ನು ಕೇಳುವುದು! ನಾವೆಲ್ಲರೂ ದೇವರ ಮಕ್ಕಳಾಗಿರಲು ಜನಿಸಿದ್ದೇವೆ. ನಾವೆಲ್ಲರೂ ದೇವರ ಸ್ವರೂಪದಲ್ಲಿ ಮಾಡಲ್ಪಟ್ಟಿದ್ದೇವೆ. ದೇವರಿಲ್ಲದೆ, ನಾವಿರಲಾರೆವು; ನಾವಿಲ್ಲದೇ, ದೇವರು ಇರಲಾರನು. ನಮ್ಮ ಆತ್ಮಿಕ ಜೀವಿತಗಳಲ್ಲಿಯ ಎಲ್ಲಾ ಚಟುವಟಿಕೆಯ ಮೂಲವು ದೇವರಾಗಿದ್ದಾನೆ. ಯೆಹೆಜ್ಕೇಲನಲ್ಲಿ, ಅರವತ್ತಕ್ಕಿಂತ ಹೆಚ್ಚು ಸಲ, ದೇವರು "ಹೀಗೆ ನಾನು ಕರ್ತನಾಗಿರುವೆನೆಂಬುದನ್ನು ತಿಳಿದುಕೊಳ್ಳುವಿರಿ" ಎಂದು ಹೇಳಿದ್ದಾನೆ. ದೇವರಿಲ್ಲದೇ ಮಾನವನು ಮಾನವನು ಒಬ್ಬಂಟಿಗನಾಗಿ ನಡೆಯುತ್ತಾನೆ.

ಬೇರೆ ಇತರ ದೇವರು ಇರುವದಿಲ್ಲ! ದಶಾಜ್ಞೆಗಳಲ್ಲಿ ಮೊದಲನೆಯ ಆಜ್ಞೆಯು "ನನ್ನ ಮುಂದೆ ನಿಮಗೆ ಬೇರೆ ದೇವರುಗಳು ಇರಬಾರದು" (ವಿಮೋಚನಕಾಂಡ 20:3). "ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನೂ ತಿಳಿಯುವುದೇ ನಿತ್ಯಜೀವವು" ಎಂದು ಯೋಹಾನ 17:3ರಲ್ಲಿ ಹೇಳಲ್ಪಟ್ಟಿದೆ. ಸಭೆಯು ದೇವರಿಂದ ನಡಿಸಲ್ಪಡಲಿ! ನಾವು ನಿಜವಾಗಿಯೂ ದೇವರನ್ನು ತಿಳಿದಿದ್ದರೆ, ನಾವೆಂದೂ ಪಾಪ ಮಾಡುತ್ತಿರಲಿಲ್ಲ. ನಾನು ಜೀವಿಸುವಂಥದ್ದು ನಾನು ದೇವರ ಬಗ್ಗೆ ನಿಜವಾಗಿಯೂ ಏನು ನಂಬುವೆನು ಎಂಬುದರ ಬಗ್ಗೆ ಒಂದು ಸಾಕ್ಷಿಯಾಗಿದೆ. "ಜೀವ ಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವುದು ಭಯಂಕರವಾದದ್ದು" (ಇಬ್ರಿಯ 10:31). ಆತನನ್ನು ತಿಳಿದುಕೊಳ್ಳಿರಿ. ಆತನನ್ನು ನಂಬಿರಿ. ಆತನಲ್ಲಿ ನಂಬಿಕೆಯಿಡಿರಿ. ಆತನನ್ನು ಪ್ರೀತಿಸಿರಿ. ಆತನನ್ನು ಆಲಿಸಿರಿ. ಆತನಿಗೆ ವಿಧೇಯರಾಗಿರಿ. ದೇವರು ಸರ್ವಾಧಿ ಕಾರವುಳ್ಳವನೋ? ದೇವರು ಹೇಳುವದನ್ನು ನಾವು ಮಾಡುವೆವೋ? ದೇವರನ್ನು ತಿಳಿದು, ಆತನು ಹೇಳುವದನ್ನು ಮಾಡದೇ ಇರುವುದು ನಿಜವಾಗಿಯೂ ತಿಳಿದು ಕೊಂಡಂಥದ್ದಾಗಿರುವದಿಲ್ಲ. ದೇವರು ದೇವರಾಗಿದ್ದರೆ, ಆಗ ಮಾನವನು ಕೇಳ ತಕ್ಕದ್ದು. "ಆಲಿಸು" ಮತ್ತು "ವಿಧೇಯನಾಗು" ಎಂಬ ಪದಗಳು ಹಿಬ್ರೂವಿನಲ್ಲಿ ಒಂದೇಯಾಗಿವೆ. ದೇವರಲ್ಲಿ ನಂಬಿಕೆಯಿಡದೇ ಇರುವದಕ್ಕೆ ಮನುಷ್ಯನಿಗೆ ನೆವವಿರುವದಿಲ್ಲ (ರೋಮಾಪುರ 1:18-23). ದೇವರನ್ನು ತಿಳಿಯಲು ಅರಿಯದ ಭವಿಷ್ಯತ್ತನ್ನು ನಂಬಲು ಎಂದೂ ಭಯಪಡಬೇಡ. ಪ್ರತಿಯೊಂದು ಕ್ಷಣದಲ್ಲಿ ಬದಲಾವಣೆಯು ಬರುವುದು. ಬದಲಾವಣೆಗೆ ಪರಿಹಾರವು ಬದಲಾಗದ ದೇವರನ್ನು ಹಿಡಿದುಕೊಳ್ಳುವುದಾಗಿದೆ. ದೇವರು ಬದಲಾಗುವದಿಲ್ಲ.

## ನಾವು ಯೇಸುವಿನಲ್ಲಿ ನಂಬತಕ್ಕದ್ದು

**ಆತನಂತಿರುವಾತನು ಆತನೊಬ್ಬನೇ ಆಗಿದ್ದಾನೆ**

ಸೃಷ್ಟಿಕರ್ತ, ದೇವರು, ಯೇಸುವಿನಲ್ಲಿ ಮಾನವ ಕುಲವನ್ನು ಸೇರಿಸಿದನು. ಇದು ಸುವಾರ್ತೆಯಾಗಿದೆ. ಅಂಥ ನರಾವತಾರವನ್ನು ಬೇರೆ ಯಾವ ಮನುಷ್ಯನೂ ಹೇಳಿಕೊಳ್ಳಲಾರನು. ಯೇಸುವು ದೇವರ ಒಬ್ಬನೇ ಮಗನಾಗಿದ್ದಾನೆ (ಯೋಹಾನ 3:16). ಪಂಚಾಶತ್ತಮದ ದಿನದಂದು (ಅಪೊಸ್ತಲರ ಕೃತ್ಯಗಳು 2). ಕ್ರೈಸ್ತರು ಇದನ್ನು ತಿಳಿದಿದ್ದಾರೆ, ನಂಬಿದ್ದಾರೆ ಮತ್ತು ಪ್ರಸಂಗಿಸಿದ್ದಾರೆ. ಹೀಗಿದ್ದರೂ, ನಮ್ಮ ಆಧುನಿಕ ಸಂಸ್ಕೃತಿಯು ಬಹುತ್ವವಾದವನ್ನು (ಧಾರ್ಮಿಕ ಮಿಶ್ರಣತೆಯನ್ನು) ಅಪ್ಪಿಕೊಂಡಿರುತ್ತದೆ. ಸಹನೆಯ ಹೆಸರಿನಲ್ಲಿ, ಸಂಸ್ಕೃತಿಯು ಸಿದ್ಧಾಂತಿಕವಾಗಿ ಯೇಸುವು ಅನೇಕರಲ್ಲಿ ಒಬ್ಬನಾಗಿದ್ದಾನೆ ಎಂದು ಒಪ್ಪಿಕೊಂಡಿರುತ್ತದೆ. ವರ್ಷಗಳಿಂದ ಸಭಾಪಂಗಡಗಳು, "ಒಂದು ಸಭೆಯು ಇನ್ನೊಂದು ಸಭೆಯಂತೆ ಒಳ್ಳೆಯದಾಗಿರುತ್ತದೆ" ಎಂದು ಕೂಗುತ್ತಿವೆ. ಅವು

ಇದನ್ನು ಆಳವಾಗಿ ಯೋಚಿಸಿರುವದಿಲ್ಲ. ಅದು ಸತ್ಯವಾಗಿದ್ದರೆ, ಆಗ "ಒಬ್ಬ ಮೆಸ್ಸೀಯನು (ಕ್ರಿಸ್ತನು) ಇನ್ನೊಬ್ಬನಂತೆ ಒಳ್ಳೆಯವನಾಗಿದ್ದಾನೆ" - "ಒಬ್ಬ ದೇವರು ಇನ್ನೊಬ್ಬ ದೇವರಂತೆ ಒಳ್ಳೆಯವನಾಗಿರುತ್ತಾನೆ" - "ಎಲ್ಲಾ ಮಾರ್ಗಗಳು ಪರಲೋಕಕ್ಕೆ ನಡಿಸುತ್ತವೆ" ಈ ತತ್ವವು ಪರಿಶುದ್ಧ ಬರಹಗಳನ್ನು ಉಲ್ಲಂಘಿಸುತ್ತದೆ; ಅದು ಯಾವ ಅರ್ಥವನ್ನೂ ಕೊಡುವದಿಲ್ಲ! ಎರಡು ದೇವರುಗಳು ಅನೇಕವಾದವುಗಳಾಗಿವೆ! ಇಬ್ಬರು ಮೆಸ್ಸೀಯರು ಅನೇಕ ಮೆಸ್ಸೀಯರಾಗಿದ್ದಾರೆ! ಎರಡು ಸಭೆಗಳು ಅನೇಕ ಸಭೆಗಳಾಗುತ್ತವೆ! ಎಫೆಸ 4:1-6 ಓದಿರಿ.

ಒಬ್ಬ ಚರಿತ್ರೆಗಾರನು ದೊಡ್ಡ ಮನುಷ್ಯರನ್ನು ಚರಿತ್ರೆಯಲ್ಲಿ ವರ್ಗೀಕರಿಸಿದ್ದಾನೆ - ಯೇಸುವಿಗೆ ಮೂರನೆಯ ಸ್ಥಾನ ಕೊಡಲ್ಪಟ್ಟಿದೆ, ಮೊಹಮ್ಮದ ಮತ್ತು ಸರ್ ಐಸಾಕ್ ನ್ಯೂಟನ್ ಅವರ ಹಿಂದೆ ಇದ್ದಾನೆ. *ಡಲ್ಲಾಸ ಮೊರ್ನಿಂಗ್ ನ್ಯೂಸ್* ಇತ್ತೀಚೆಗೆ, "ನೂತನ ಆತ್ಮಿಕತೆಯು" ಈಗ ಒಂದು ಭಾಗ ಯೇಸು ಮತ್ತು ಎರಡು ಭಾಗ ಬುದ್ಧ ಆಗಿರುತ್ತದೆ ಎಂದು ಹೇಳಿದೆ! ಇದು ಅಪಹಾಸ್ಯ ಮಾಡುವಂಥದ್ದಾಗಿರುತ್ತದಲ್ಲದೇ, ದೇವಧೂಷಣೆಯು ಆಗಿರುತ್ತದೆ! ನಮ್ಮ ಅನುದಿನದ ನಡೆಯುವಿಕೆಯು ಕ್ರಿಸ್ತ ನಡೆಯುವಿಕೆಯಾಗಿದೆ. ಯೇಸುವು ಎಲ್ಲಾ ಚರಿತ್ರೆಯಲ್ಲಿ ಅತೀ ಹೆಚ್ಚಾದ ಮಹತ್ವದ ವ್ಯಕ್ತಿಯಾಗಿದ್ದಾನೆ, ಜೀವಿಸಿದವರಲ್ಲಿ ಅತಿ ದೊಡ್ಡ ವ್ಯಕ್ತಿಯಾಗಿದ್ದಾನೆ. ಕ್ರೈಸ್ತನಾಗಿರುವುದು ಎಂಥಾ ಭಾಗ್ಯವಾಗಿದೆಯಲ್ಲವೇ!

"ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ. ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹಾನ 14:6) ಎಂದು ಯೇಸು ಹೇಳಿದನು. ಯೇಸುವು ನಿಜವಾದವನಾಗಿರುವುದು ಅಲ್ಲದೇ ಆತನು "ಸತ್ಯವಾಗಿದ್ದಾನೆ"! ಆತನು "ಪುನರುತ್ಥಾನವೂ ಜೀವವೂ" ಆಗಿದ್ದಾನೆ (ಯೋಹಾನ 11:25). ಯೇಸುವಿನ "ನಾನು ಆಗಿದ್ದೇನೆ" ಎಂಬವುಗಳನ್ನು ಓದಿರಿ. ಯೇಸುವಿನಂತೆ ಯಾವ ಮನುಷ್ಯನೂ ಮಾತಾಡಲಿಲ್ಲ. "... ನನ್ನನ್ನು ಆತನೆಂದು ನೀವು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರಿ" ಎಂದು ಆತನು ಹೇಳಿದನು (ಯೋಹಾನ 8:24); "ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು" (ಯೋಹಾನ 8:32). ಯೇಸುವನ್ನು ನೋಡುವುದು ದೇವರನ್ನು ನೋಡುವುದಾಗಿದೆ (ಯೋಹಾನ 14:9). ಯೇಸುವು ಜೀವಕರವಾದ ರೊಟ್ಟಿ (ಯೋಹಾನ 6:48). ಯೇಸುವು ದೇವರ ಕುರಿಮರಿಯಾಗಿದ್ದಾನೆ (ಯೋಹಾನ 1:29). ಯೇಸುವು ಎದ್ದಿದ್ದಾನೆ (ಲೂಕ 24:5, 6). ಮೊಹಮ್ಮದನು ಸತ್ತು ಹೋದನು. ಬುದ್ಧನು ಸತ್ತು ಹೋದನು. ಯೇಸುವು ಜೀವಿಸುತ್ತಾನೆ! ಸತ್ತು ಹೋದ ರಕ್ಷಕನ ಉಪಯೋಗವೇನು? ಅನೇಕರು ಹೇಳಿದಂತೆ "ಯೇಸುವು ಸುಳ್ಳುಗಾರನು, ಹುಚ್ಚನು ಆಗಿರುತ್ತಾನೆ, ಇಲ್ಲವೇ *ಕರ್ತನಾಗಿರುತ್ತಾನೆ.*"

ಕೊಲೊಸ್ಸೆಯವರಿಗೆ ಬರೆದ ಪತ್ರಿಕೆಯು ಪ್ರಸ್ತುತವಾದ ಪತ್ರಿಕೆಯಾಗಿರುತ್ತದೆ. ಬಹುಶಃ ಅದು ಇಂದು ನಮ್ಮ ಸಂಸ್ಕೃತಿಯಲ್ಲಿ ಅತೀ ಹೆಚ್ಚಾಗಿ ಅಗತ್ಯವಾದದ್ದಾಗಿದೆ. *"ಅದು ಕ್ರಿಸ್ತನು, ಕಾಲವು"* ಎಂದು ಪೌಲನು ಹೇಳಿದನು. ಇಬ್ರಿಯರಿಗೆ ಬರೆದ ಪತ್ರಿಕೆಯು ಒಂದು ದೊಡ್ಡಕಾರಣಕ್ಕಾಗಿ - ದಯೆಯುಳ್ಳ *ಯೇಸುವಾದ* ಒಬ್ಬಾತನ ಬಗ್ಗೆ ಬೋಧಿಸಲು ಬರೆಯಲ್ಪಟ್ಟಿದೆ! ಕ್ರೈಸ್ತತ್ವವು ಗಡುಚಾದದ್ದಾಗಿರುವದಿಲ್ಲ: (1) ದೇವರು ಯೇಸುವನ್ನು ನಮಗೆ ಕೊಟ್ಟನು, ಮತ್ತು (2) ನಮ್ಮ ಅನುದಿನದ ನಡೆಯುವಿಕೆಯಲ್ಲಿ ದೇವರಿಗೆ ಯೇಸುವನ್ನು ಹಿಂದಿರುಗಿ ಕೊಡುತ್ತೇವೆ. ದೇವರು ಶಿಲುಬೆಯ ಬಳಿಯಲ್ಲಿ ಪ್ರತಿಯೊಂದು ಸಾಹಸ ಮಾಡಿದನು; ಪ್ರತಿಯೊಂದನ್ನು ನಂಬಿಕೆಯಿಂದ ನಾವು ಸಾಹಸ ಮಾಡುತ್ತೇವೆ. ಬೈಬಲಿಗನುಗುಣವಾಗಿ ಜೀವಿಸುವದರಿಂದ ಪ್ರಸ್ತುತವಾದವರಾಗಿರಲು ನಮಗೆ

ಧೈರ್ಯವಿದೆಯೋ? ಕ್ರಿಸ್ತನು ನಾವು ಬಯಸುವ *ವ್ಯಕ್ತಿಯಾಗಿರದೇ ಇರಬಹುದು* - ಆದರೆ ಆತನು ನಮಗೆ *ಅಗತ್ಯವಾದ ವ್ಯಕ್ತಿಯಾಗಿದ್ದಾನೆ*!

**ಆತನು ಕರ್ತನಾಗಿದ್ದಾನೆ**

ಯೇಸುವು "ಒಡೆಯನು" ಆಗಿದ್ದಾನೆ. ನಮ್ಮ ಸಂಸ್ಕೃತಿಯು, ಅಧಿಕಾರವನ್ನು ಅಲ್ಲಗಳೆದು, "ಕರ್ತನು" ಎಂಬ ಪದವನ್ನು ತೆಗೆದು ಹಾಕಿದೆ; ಆದಾಗ್ಯೂ ಅದು ಗಹನವಾದ ಬೈಬಲಿನ ಪದವಾಗಿ ಉಳಿದುಕೊಂಡಿದೆ. ಒಡೆಯನು, "ಅವನಿಗೆ ಒಬ್ಬ ವ್ಯಕ್ತಿಯು ಒಳಪಟ್ಟಿರುತ್ತಾನೆ, ಮತ್ತು ಅದರ ಬಗ್ಗೆ ಅವನಿಗೆ ತೀರ್ಮಾನಿಸುವ ಅಧಿಕಾರವಿರುತ್ತದೆ." *"ನನ್ನದು"* ಎಂದು ಯೇಸುವು ಕರೆಯಲಾರದ ಭೂಮಿಯ ಒಂದು ಇಂಚೂ ಇರುವುದಿಲ್ಲ. ಯೇಸುವು ನಮ್ಮನ್ನು ಸೃಷ್ಟಿಸಿದ್ದಾನೆ; ಯೇಸುವು ನಮ್ಮನ್ನು ವಿಮೋಚಿಸಿದ್ದಾನೆ; ಪ್ರತಿಯೊಂದು ರೀತಿಯಲ್ಲಿ ಯೇಸುವು ಕರ್ತನಾಗಿದ್ದಾನೆ. ಅನುದಿನದ ನಡೆಯುವಿಕೆಯು ಯೇಸುವಿನ ಒಡೆತನದಲ್ಲಿ ಜೀವಿಸುವಂಥದ್ದಾಗಿದೆ. ಪಂಚಾಶತ್ತಮದ ದಿನದಂದು ಪೇತ್ರನು ಪ್ರಥಮ ಸುವಾರ್ತೆಯ ಪ್ರಸಂಗವನ್ನು ಈ ಮಾತುಗಳಿಂದ ಮುಗಿಸಿದನು: "ಆದುದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬುದು ಇಸ್ರಾಯೇಲ್ ಕುಲದವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ" (ಅಪೊಸ್ತಲರ ಕೃತ್ಯಗಳು 2:36), ಯೇಸುವು ಮನುಷ್ಯನಿಗೆ ದೇವರ ಅಂತಿಮ ಮತ್ತು ಸಂಪೂರ್ಣವಾದ ವಾಕ್ಯವಾಗಿದ್ದಾನೆ (ಇಬ್ರಿಯ 1:1-3). ಹೀಗೆ ಒಬ್ಬನ ಬಾಯಿಯಿಂದ ಅರಿಕೆ ಮಾಡುವುದು ರಕ್ಷಣೆಯಲ್ಲಿ ಪರಿಣಾಮಗೊಳ್ಳುತ್ತದೆ (ರೋಮಾಪುರ 10:10). ಸಾಕಷ್ಟು ತೃಪ್ತಿಕರ ಕರ್ತನು ಯೇಸುವಾಗಿದ್ದಾನೆ.

ದೇವರು ಯೇಸುವನ್ನು ಕರ್ತನನ್ನಾಗಿ ಮಾಡಿದನು. ಜನರು ಮಾಡಲಿಲ್ಲ. ಯೇಸುವು, ಜನರು ಆತನನ್ನು ಸ್ವೀಕರಿಸಲಿ, ಸ್ವೀಕರಿಸದಿರಲಿ ಕರ್ತನಾಗಿದ್ದಾನೆ. ಒಂದು ದಿನ, "ಪ್ರತಿಯೊಬ್ಬರೂ ಯೇಸುವಿನ ಹೆಸರಿನಲ್ಲಿ ಅಡ್ಡ ಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು" (ಫಿಲಿಪ್ಪಿ 2:11). "ಸಂಶಯಪಡುವ ತೋಮನು" ತನ್ನ ನಿರ್ಧಾರ ಮಾಡಿಕೊಳ್ಳಬೇಕಾಗಿತ್ತು. ಉತ್ಥಾನವಾದ ಕರ್ತನ ಮುಂದೆ ತೋಮನು, "ನನ್ನ ಸ್ವಾಮೀ, ನನ್ನ ದೇವರು!" ಎಂದು ಹೇಳಿದನು (ಯೋಹಾನ 20:28). ನಾವೂ ಸಹ ನಮ್ಮ ಮನಸ್ಸನ್ನು ಮಾಡಿಕೊಳ್ಳಬೇಕು. ಒಡೆತನವು ವಿಧೇಯತೆಯನ್ನು ಕೇಳುತ್ತದೆ. "ನೀವು ನನ್ನನ್ನು 'ಸ್ವಾಮೀ ಸ್ವಾಮೀ' ಎಂದು ಕರೆದು ನಾನು ಹೇಳುವದನ್ನು ನಡಿಸದೆ ಇರುವದೇಕೆ?" ಎಂದು ಯೇಸು ಹೇಳಿದನು (ಲೂಕ 6:46).

ಯೇಸುವು ಕರ್ತನು ಮತ್ತು ಕ್ರಿಸ್ತನು *ಎರಡೂ* ಆಗಿದ್ದಾನೆ. ಆತನು *ಮೊದಲು* ಕರ್ತನಾಗಿದ್ದಾನೆ! ಜನರು ಯೇಸುವನ್ನು ರಕ್ಷಕನಂತೆ ಮತ್ತು ಆಶೀರ್ವದಿಸುವವನಂತೆ ಬಯಸುತ್ತಾರೆ - ಆದಾಗ್ಯೂ ಅವರು ಆತನ ಒಡೆತನವನ್ನು ತಿರಸ್ಕರಿಸುತ್ತಾರೆ. ಆತನಿಗೆ ನಮ್ಮ ಕರ್ತನಂತೆ ವಿಧೇಯರಾಗುವವರೆಗೆ ಯೇಸುವು ನಮ್ಮ ರಕ್ಷಕನಾಗಿರಲಾರನು! ಯೇಸುವು ತಾನು ಆಜ್ಞಾಪಿಸಲಾರದವರನ್ನು ರಕ್ಷಿಸಲಾರನು. ಯೇಸುವಿಗೆ ಮೆಸ್ಸೀಯನು (ರಕ್ಷಕನು) ಎಂಬ ಶಿರೋನಾಮವು ಹೊಸ ಒಡಂಬಡಿಕೆಯಲ್ಲಿ ಇಪ್ಪತ್ತು ಇಲ್ಲವೇ ಅದಕ್ಕಿಂತ ಹೆಚ್ಚು ಸಲ ಕೊಡಲ್ಪಟ್ಟಿದೆ. ನಾಲ್ಕು ನೂರರಷ್ಟು ಸಲ ಆತನು ಕರ್ತನೆಂದು ಘೋಷಿಸಲ್ಪಟ್ಟಿದ್ದಾನೆ. ನಮ್ಮ ದೈನಂದಿನ ನಡೆಯು ಕ್ರಿಸ್ತನ ನಡೆಯುವಿಕೆಯಂತಿದೆ. ನಂಬಿಕೆಯನ್ನು ನಂಬಿಗಸ್ತಿಕೆಯಿಂದ ಬೇರೆ ಮಾಡಬೇಡಿರಿ.

ನನ್ನನ್ನು "ಸ್ವಾಮೀ, ಸ್ವಾಮೀ" ಅನ್ನುವವರೆಲ್ಲರು ಪರಲೋಕರಾಜ್ಯದಲ್ಲಿ ಸೇರುವರೆಂದು ನೆನೆಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು. "ಸ್ವಾಮೀ, ಸ್ವಾಮೀ, ನಿನ್ನ ಹೆಸರಿನ ಮೇಲೆ ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ" ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. ಆಗ ನಾನು ಅವರಿಗೆ - "ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿ ನಡೆಯುವವರೇ, ನನ್ನಿಂದ ತೊಲಗಿಹೋಗಿರಿ" ಎಂದು ಎಲ್ಲರ ಮುಂದೆ ಹೇಳಿ ಬಿಡುವೆನು (ಮತ್ತಾಯ 7:21-23).

"ನನ್ನ ಬಳಿಗೆ ಬನ್ನಿರಿ" (ಮತ್ತಾಯ 11:28-30) ಎಂಬುದು "ನನ್ನನ್ನು ಹಿಂಬಾಲಿಸಿರಿ" (ಮತ್ತಾಯ 4:19) ಎಂದು ವಿವರಿಸಲ್ಪಟ್ಟಿದೆ. ನಾವು ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಲ್ಪಟ್ಟಿದ್ದೇವೆ (ಗಲಾತ್ಯ 2:20). ನಾವು ಕ್ರಿಸ್ತನ ಸಾರೂಪ್ಯವುಳ್ಳವರಾಗಿ ದ್ದೇವೆ (ರೋಮಾಪುರ 8:29). ನಾವು ಆತನ ಸ್ವರೂಪದಲ್ಲಿ ಬದಲಾಗಬೇಕು (2 ಕೊರಿಂಥ 3:18). ನಾವು ಆತನ ಉದಾಹರಣೆಯನ್ನು ಅನುಸರಿಸಬೇಕು (1 ಪೇತ್ರ 2:21).

ಯೇಸುವು ತನ್ನ ಜೀವವನ್ನು ನಮಗಾಗಿ ಕೊಟ್ಟನು
ತನ್ನ ಜೀವವನ್ನು ನಮಗಾಗಿ ಕೊಡಲು ಆತನು ಹಾಗೆ ಮಾಡಿದನು
ನಮ್ಮ ಮುಖಾಂತರವಾಗಿ ತನ್ನ ಜೀವಿತವನ್ನು ಜೀವಿಸಲು ಆತನು ಹಾಗೆ ಮಾಡಿದನು.

ಯೇಸುವು ನನ್ನಲ್ಲಿ ರೂಪಿಸಲ್ಪಟ್ಟಿರುವನೋ?

**ಆತನು ನಮ್ಮ ರಕ್ಷಕನು**

ಯೇಸುವು ಮಾತ್ರವೇ ನಮಗೆ ರಕ್ಷಣೆಯನ್ನು ತರಬಲ್ಲನು; *ಬೇರೆ ಮಾರ್ಗವೇ ಇರುವದಿಲ್ಲ!* ಗೆತ್ಸೇಮನೆಯಲ್ಲಿ ಬೆವರು ಸುರಿಸುತ್ತಿದ್ದ ತನ್ನ ಕುಮಾರನಿಗೆ ದೇವರು "ಇಲ್ಲ" ಎಂದು ಹೇಳಿದಾಗ, "ಬೇರೆ ಮಾರ್ಗವೇ ಇರುವದಿಲ್ಲ!" ಎಂದು ದೇವರು ಕೂಗುತ್ತಿದ್ದನು. ಮನುಷ್ಯನು ಪಾಪದಲ್ಲಿ ತಪ್ಪಿಹೋಗಿದ್ದಾನೆ ಹಾಗೂ ನರಕದ ದಂಡನೆ ಹೊಂದಿದ್ದಾನೆ. ಅವನು ತನ್ನನ್ನು ತಾನೇ ರಕ್ಷಿಸಿಕೊಳ್ಳಲಾರನು; ಅವನು ರಕ್ಷಣೆಯನ್ನು ಕೊಂಡುಕೊಳ್ಳ ಲಾರನು. ಮನುಷ್ಯನು ಮಾಡಲಾರದ್ದನ್ನು ದೇವರು ಮನುಷ್ಯನಲ್ಲಿ ಮಾಡಿದನು. ಯೇಸುವು "ದೇವರ ಕುರಿಮರಿಯಾಗಿದ್ದಾನೆ." ದೇವರು, ದೇವರು ತಾನೇ, ಪಾಪವನ್ನು, ಮರಣವನ್ನು, ನರಕವನ್ನು ಮತ್ತು ಸೈತಾನನ್ನು ಸೋಲಿಸಲು ಯೇಸುವಿನಲ್ಲಿ ಮಾನವ ಕುಲವನ್ನು ಸೇರಿ ಕೊಂಡನು. ಒಬ್ಬಾತನು ಎಲ್ಲರಿಗಾಗಿ ಮರಣ ಹೊಂದಿದನು (2 ಕೊರಿಂಥ 5:15). ಕ್ರಿಸ್ತನಲ್ಲಿ ದೇವರು ನಮ್ಮನ್ನು ಸಂಧಾನಗೊಳಿಸಿದನು (2 ಕೊರಿಂಥ 5:19-21). ನಮ್ಮಷ್ಟಕ್ಕೆ ನಾವೇ ಮಾಡಲಾರದಂಥದ್ದನ್ನು ನಮಗಾಗಿ ಮಾಡಲು ದೇವರು ಮಾನವ ಕುಲವನ್ನು ಕೂಡಿಕೊಂಡನು ಎಂಬ ಸುವಾರ್ತೆಯ ಸಂದೇಶವು ನಮ್ಮ ಅಸ್ತಿವಾರವಾಗಿದೆ. ಕ್ರಿಸ್ತನನ್ನು ಬಿಟ್ಟು ಯಾವುದನ್ನಾದರೂ ಯಾಕೆ ಪ್ರಸಂಗಿಸಬೇಕು? ಪ್ರಸಂಗಿಸಲಿಕ್ಕೆ ಬೇರಾವುದೂ ಇರುವದಿಲ್ಲ! ಯೇಸುವು *ಮಾತ್ರವೇ ರಕ್ಷಕನಾಗಿದ್ದಾನೆ*! ಯೇಸುವಿನಲ್ಲಿ, ಕ್ರಿಸ್ತನಲ್ಲಿ! ಮೆಸ್ಸೀಯನಲ್ಲಿ, ರಕ್ಷಕನಲ್ಲಿ ಬಿಟ್ಟು ಬೇರೆಲ್ಲಿಯೂ ರಕ್ಷಕನಿರುವದಿಲ್ಲ. *ಎಂಥಾ ರಕ್ಷಕನು!*

ಪಾಪಿಗಳು ಕೇವಲ ರಕ್ಷಿಸಲ್ಪಡುವದಕ್ಕಿಂತ ಹೆಚ್ಚಿನದರ ಅವಶ್ಯಕತೆಯುಳ್ಳವರಾಗಿರುತ್ತಾರೆ: ರಕ್ಷಣೆಯು ಕೊಡಲ್ಪಟ್ಟರೆ, ಪಾಪಿಗಳು ಕೇವಲ ಒಂದೇ ನಿಮಿಷದಲ್ಲಿ ಪುನಃ ಪಾಪಿಗಳಾಗಿರುತ್ತಾರೆ. ಯೇಸುವು ಪರಾರ್ಥ ವಿಜ್ಞಾಪನೆ ಮಾಡಲು ಯಾವಾಗಲೂ ಜೀವಿಸುತ್ತಾನೆ (ಇಬ್ರಿಯ 7:25). ದೇವರಿಗೂ ಮನುಷ್ಯರಿಗೂ ಮಧ್ಯದಲ್ಲಿ ಯೇಸುವೊಬ್ಬನೇ ಮಧ್ಯಸ್ಥಗಾರನಾಗಿರುತ್ತಾನೆ (1 ತಿಮೊಥೆ 2:5). ರಕ್ಷಿಸಬಲ್ಲ ಯಾವುದೇ ಇತರ ಹೆಸರು ಆಕಾಶದ ಕೆಳಗೆ ಇರುವದಿಲ್ಲ (ಅಪೊಸ್ತಲರ ಕೃತ್ಯಗಳು 4:11, 12). ಯೇಸುವು ಮನುಷ್ಯರನ್ನು ನಿಜವಾಗಿಯೂ ಇಲ್ಲವೇ ಸಾಧ್ಯತೆಯಲ್ಲಿಯೂ ರಕ್ಷಿಸಲಿಕ್ಕೆ ಬರಲಿಲ್ಲ; ಪಾಪಿಗಳನ್ನು ರಕ್ಷಿಸಲ್ಪಡುವವರನ್ನಾಗಿ ಮಾಡಲು ಬಂದನು. ಯೇಸುವನ್ನು ಬಿಟ್ಟು, ನಾವು ನಮ್ಮ ಪಾಪಗಳಲ್ಲಿ ಸತ್ತು ಹೋಗಬಹುದು (ಅಪೊಸ್ತಲರ ಕೃತ್ಯಗಳು 4:12).

ಯೇಸುವಿನಲ್ಲಿ ಜೀವಿಸುವುದು "ದೇವರು ಸರಿಯಾಗಿದ್ದಾನೆ" ಎಂದು ಹೇಳುವುದಾಗಿದೆ. ಸಮಸ್ಯೆಯು ಪಾಪವಾಗಿದೆ; ಉತ್ತರವು ಶಿಲುಬೆಯಾಗಿದೆ. ಕ್ರೈಸ್ತ ಜೀವಿತ ಜೀವಿಸಲು ಯೇಸುವು ನಮಗೆ ಸಹಾಯ ಮಾಡುವದಿಲ್ಲ - ಯೇಸುವು ನಮ್ಮ ಜೀವಿತವಾಗಿದ್ದಾನೆ.

## ಇಂದು ಕ್ರೈಸ್ತತ್ವದಲ್ಲಿ ನಾವು ನಂಬತಕ್ಕದ್ದು

ನಮಗೆ ಯಾವಾಗಲೂ ಅಗತ್ಯವಾದದ್ದು ಇಂದು ನಮಗೆ ಅಗತ್ಯವಾಗಿರುವುದು: ಅದು ಯೇಸು ಕ್ರಿಸ್ತನು! ಹೊಸ ಒಡಂಬಡಿಕೆಯು "ಕ್ರಿಸ್ತನಲ್ಲಿ" ಇಲ್ಲವೇ ಅದಕ್ಕೆ ಸಮಾನವಾದ ಮಾತನ್ನು 119 ಸಲ ಉಪಯೋಗಿಸುತ್ತದೆ. ಅದು "ಇಂದು" ಕ್ರೈಸ್ತತ್ವವಾಗಿರುತ್ತದೆ; "ನಾಳೆ" ಅಲ್ಲ, ಇಲ್ಲವೇ "ನಾಡಿದ್ದು" ಅಲ್ಲ, ಇಬ್ರಿಯರ ಗ್ರಂಥವು ಯೇಸುವು ತನ್ನನ್ನು ಒಂದೇ ಸಾರಿ ಸಮರ್ಪಿಸಿಕೊಂಡನು ಎಂದು ಹೇಳುತ್ತದೆ (7:27; 10:10). ಮೊದಲನೆಯ ಶತಮಾನದಲ್ಲಿಯ ಜನರು ತಾವು ಮೊದಲನೆಯ ಶತಮಾನದಲ್ಲಿ ಇದ್ದೇವೆಂಬುದನ್ನೂ ತಿಳಿದಿರಲಿಲ್ಲ (ಕ್ಯಾಲೆಂಡರ್ ಅನಂತರದಲ್ಲಿ ಬಂದಿತು). ಪ್ರತಿಯೊಂದು ಶತಮಾನಕ್ಕೆ ಏನಾದರೂ ಹೊಸದಾದದ್ದು, ಏನಾದರೂ ಭಿನ್ನವಾದದ್ದು ಅಗತ್ಯತೆ ಇರುವದಿಲ್ಲ. ಮೊದಲನೆಯ ಶತಮಾನಕ್ಕೆ "ಇಂದು ಕ್ರೈಸ್ತತ್ವವು" ಇತ್ತು. ಇದು ನಮಗೆ ಅಗತ್ಯವಾದ ಎಲ್ಲವೂ ಆಗಿರುವುದು - ಯಾವಾಗಲೂ ಇದು ನಮಗೆ ಅಗತ್ಯವಾಗಿರುವುದು. ಪುರಾತನ ಕಾರನ್ನು ಪುನಃ ರಚಿಸುವಂತೆ ಸಭೆಯನ್ನು ನೀವು ಪುನಃ ಸ್ಥಾಪಿಸಲಾರಿರಿ. ಕ್ರಿಸ್ತನು ದೇವರ ನಿತ್ಯವಾದ ಉತ್ತರವಾಗಿದ್ದಾನೆ. ನಿಮಗೆ ಗೋಧಿ ಬೇಕಾದಾಗ ಗೋಧಿಯ ಬೀಜವನ್ನು ಬಿತ್ತುತ್ತೀರಿ. ನಿಮಗೆ ಕ್ರೈಸ್ತತ್ವವು ಬೇಕಾದಾಗ ಸುವಾರ್ತೆಯ ಬೀಜವನ್ನು ಬಿತ್ತಿರಿ (ಲೂಕ 8:11; ರೋಮಾಪುರ 1:16). ಸಭೆಯು ತಾನು ಪ್ರಸಂಗಿಸುವದನ್ನು ರೂಢಿಸಬೇಕು; ಕ್ರೈಸ್ತರು ತಮ್ಮ ವಿಶ್ವಾಸವನ್ನು ಜೀವಿಸತಕ್ಕದ್ದು. ಯೇಸುವು ನಿನ್ನೆ ಮರಣ ಹೊಂದಿದಂತೆ, ಈ ಪ್ರಾತಃಕ್ಕಾಲ ಎದ್ದು ಬಂದಂತೆ ಮತ್ತು ಈ ರಾತ್ರಿ ಹಿಂದಿರುಗಿ ಬರುವವನಂತೆ ಜೀವಿಸಿರಿ!

***ಬನ್ನಿರಿ, ನನ್ನೊಂದಿಗೆ ನಡೆಯಿರಿ.***

© 2009 Truth for Today